ಬಸ್ಸು ಹೊರಡಲು ಇನ್ನೇನು ಐದು ನಿಮಿಷಗಳಿದ್ದ ಹಾಗೆ ಹಿತ ಅವಸರ ಅವಸರವಾಗಿ ಬಸ್ಸು ಹತ್ತಿದಳು. ಬಸ್ಸಿನಲ್ಲಿ ಖಾಲಿ ಸೀಟಿಗೇನೂ ಕೊರತೆ ಇರಲಿಲ್ಲ. ಹಾಗಾಗಿ ಅವಳಿಗೆ ಸೀಟು ದೊರಕುವುದು ಕಷ್ಟವಾಗಿರಲಿಲ್ಲ. ಹಾಗೆ ತನ್ನ ಪಕ್ಕಇದ್ದ ಖಾಲಿ ಸೀಟಿನಲ್ಲಿತನ್ನ ಪುಟ್ಟ ಬ್ಯಾಗನ್ನುಇರಿಸಿದಳು. ಕಂಡಕ್ಟರ್ ಜನ ತುಂಬಿಸುವ ತನ್ನ ಕೊನೆಯ ಪ್ರಯತ್ನವಾಗಿ 'ಸೀಮತ್ತೂರ್, ಸೀಮತ್ತೂರು' ಎಂದು ಕರೆಯುತಿದ್ದ. ಬಸ್ಸು ಬಿಸಿಲಲ್ಲಿ ನಿಂತಿದ್ದ ಕಾರಣ ಒಳಗಡೆ ಸಿಕ್ಕಾಪಟ್ಟೆ ಸೆಕೆಯ ಅನುಭವವಾಗುತಿತ್ತು. ಪ್ರಯಾಣಿಕರು ತಮ್ಮಕೈಗೆ ಸಿಕ್ಕಿದ ಪೇಪರ್, ಕರ್ಚೀಫ್‌ನಲ್ಲಿ ಗಾಳಿ ಹಾಕಿಕೊಳ್ಳುವ ದೃಶ್ಯ ಸೆಕೆಯ ತೀವ್ರತೆಯನ್ನು ಎದ್ದು ತೋರಿಸುತ್ತಿತ್ತು. ಅಷ್ಟರಲ್ಲೇ ಬಸ್ಸು ಹೊರಟ ಕಾರಣ ತಣ್ಣನೆಯ ಗಾಳಿ ಬೀಸ ತೊಡಗಿದಂತೆಯೇ ಪ್ರಯಾಣಿಕರು ನೆಮ್ಮದಿಯ ಉಸಿರು ಬಿಟ್ಟಿದ್ದರು.

ಹಿತ ಹೀಗೆ ಪೂರ್ವಾ ಸಿದ್ಧತೆ ಇಲ್ಲದೆ ಪ್ರಯಾಣಿಸುವುದು ಬಹಳ ವಿರಳ. ಇಂದು ಅವಳು ಬಹಳ ಕಡಿಮೆ ಅವಧಿಯಲ್ಲಿ ನಿರ್ಧರಿಸಿ ಈ ಪ್ರಯಾಣವನ್ನು ಪ್ರಾರಂಭಿಸಿದ್ದಳು. ಅವಳು ಅಮೆರಿಕದ ಟೆಕ್ಸಾಸ್‌ನಲ್ಲಿ ಉದ್ಯೋಗಿ. ಹುಟ್ಟಿದ್ದು, ಬೆಳೆದಿದ್ದು ಮತ್ತು ಪಿಯುಸಿವರಗೆ ಓದಿದ್ದು ಇದೇ ಸಣ್ಣ ಹಳ್ಳಿ ನಾಟೇಕಲ್ಲಿನಲ್ಲಿ. ಇಂಜಿನಿಯರಿಂಗ್ ಓದಿಗಾಗಿ ಹಳ್ಳಿಯಿಂದ ನಗರಕ್ಕೆ ಹೋಗಲೇಬೇಕಾಗಿ ಬಂತು. ಆಮೇಲೆ ಕೆಲಸಕ್ಕೆ ಸೇರಿದ್ದು ಬಹು ರಾಷ್ಟ್ರೀಯ ಕಂಪೆನಿಯೊಂದರಲ್ಲಿ. ಬೆಂಗಳೂರಿನಲ್ಲಿ ಆರು ತಿಂಗಳ ತರಬೇತಿ ಮುಗಿಸಿ ನಂತರ ಅವಳು ಅಮೇರಿಕಕ್ಕೆ ಹೋಗಿದ್ದಳು. ಮೂರು ವರ್ಷದಿಂದ ಅಲ್ಲೇ ನೆಲೆಸಿದ್ದಳು. ವರ್ಷದಲ್ಲಿ ಒಂದು ತಿಂಗಳು ರಜೆ ಸಿಗುತಿತ್ತು. ಆ ರಜೆಗೆ ತಪ್ಪದೇ ಊರಿಗೆ ಬರುತ್ತಿದ್ದಳು. ಅವಳ ಸ್ವಭಾವದ ಬಗ್ಗೆ ಹೇಳುವುದಾದರೆ ಆಧುನಿಕ ನಗರದಲ್ಲಿ ಕೈ ತುಂಬ ಸಂಪಾದಿಸುತ್ತಿದ್ದರೂ ಆಧುನಿಕತೆಯ ವ್ಯಾಮೋಹ ಅವಳಿಗಿರಲಿಲ್ಲ. ಯಾವುದೇ ಆಧುನಿಕ ಸೌಲಭ್ಯಗಳ ಹೊರತಾಗಿಯೂ ಅವಳಿಗೆ ತನ್ನ ಹುಟ್ಟೂರು ತುಂಬಾ ಇಷ್ಟವಾದ ಸ್ಥಳವಾಗಿತ್ತು. ರಜಾದಲ್ಲಿ ಬಂದಾಗ ಮನೆಯವರ ಜೊತೆ ಖುಷಿ ಖುಷಿಯಾಗಿ ಸಮಯ ಕಳೆಯುತ್ತಿದ್ದಳು. ದೊಡ್ಡ ಕಂಪೆನಿಯಲ್ಲಿ ಕೆಲಸ, ಕೈತುಂಬ ಸಂಬಳ. ಇದು ಯಾವುದೂ ಕೂಡ ಅವಳ ನಡೆ ನುಡಿ, ಮತ್ತು ಸ್ವಭಾವವನ್ನು ಬದಲಾಯಿಸಿರಲಿಲ್ಲ. ಹಾಗಾಗಿ ಅವಳು ಎಲ್ಲರ ಪ್ರೀತಿಯನ್ನು ಗಳಿಸಿದ್ದಳು. ಎಂದಿನಂತೆ ಈ ಸಲವೂ ಕೂಡ ಒಂದು ತಿಂಗಳ ರಜೆಯ ಮೇಲೆ ಊರಿಗೆ ಬಂದಿದ್ದಳು ಹಿತ. ಬಂದ ಮರು ದಿನವೇ ಹೀಗೆ ಅವಸರವಾಗಿ ಪ್ರಯಾಣಿಸ ಬೇಕಾದ ಸಂದರ್ಭ ಬಂದ ಕಾರಣದ ಹಿನ್ನೆಲೆಯನ್ನು ಬಸ್ಸಿನಲ್ಲಿ ಕುಳಿತು ಮೆಲುಕು ಹಾಕತೊಡಗಿದ್ದಳು.

ಅಂದು ಮಾಮೂಲಿನಂತೆ ಕೆಲಸದಾಕೆ ಶಾಂತ ಮತ್ತು ಹಿತಳ ಅಮ್ಮ ಸರೋಜಮ್ಮ ತೋಟದಲ್ಲಿನ ಕೆರೆಯಲ್ಲಿ ಬಟ್ಟೆ ಒಗೆಯುತ್ತಿದ್ದರು. ಶಾಂತ ಬಟ್ಟೆ ಗಳನ್ನು ಸೋಪು ಹಾಕಿ ಉಜ್ಜಿ ಅಮ್ಮನಿಗೆ ಕೊಡುತ್ತಿದ್ದರೆ ಅಮ್ಮ ನೀರಿನಲ್ಲಿ ಬಟ್ಟೆ ಯನ್ನು ಜಾಲಾಡಿಸಿಡುತ್ತಿದ್ದರು. ಕೈ ಕೆಲಸ ಮಾಡುತ್ತಿದ್ದಂತೆಯೇ ಬಾಯಿ ಊರಿನ ಸುದ್ದಿ ಮಾತನಾಡುತ್ತಿತ್ತು. ಅಲ್ಲೇ ಪಕ್ಕದಲ್ಲಿ ಇದ್ದ ಕಲ್ಲಿನಲ್ಲಿ ಕುಳಿತಿದ್ದ ಹಿತ ತನ್ನ ಪಾದಗಳನ್ನು ನೀರಿನಲ್ಲಿ ಇಳಿಬಿಟ್ಟು ಅದಕ್ಕೆ ಮುತ್ತಿಗೆ ಹಾಕುವ ಮೀನುಗಳನ್ನು ನೋಡಿ ಸಂತೋಷ ಪಡುತ್ತಿದ್ದಳು. 'ಅಕ್ಕಾ, ಈ ಸಲ ನೀವು ಯಾರ ಮನೆಗೆ ಮೊದಲು ಹೋಗುತ್ತೀರಾ?' ಎಂದು ಅವಳನ್ನು ಮಾತಿಗೆಳೆದಿದ್ದಳು ಶಾಂತ. ರಜಾದಲ್ಲಿ ಬಂದಾಗ ಗೆಳಯ ಗೆಳತಿಯರ ಮನೆಗೆ ಮತ್ತು ಹತ್ತಿರದ ಸಂಬಂಧಿಕರ ಮನೆಗೆ ಹೋಗುವ ಅವಳ ಪದ್ಧತಿ ಬಗ್ಗೆ ತಿಳಿದೇ ಅವಳು ಈ ಪ್ರಶ್ನೆ ಕೇಳಿದ್ದಳು. 'ರಂಜಿತಾ ಚಿಕ್ಕಿ ಮನೆಗೆ' ಒಂದು ನಿಮಿಷ ಕೂಡ ಯೋಚಿಸದೆ ಉತ್ತರಿಸಿದ್ದಳು. ಅದಕ್ಕೆ ಕಾರಣವೂ ಇತ್ತು. ಕಳೆದ ಬಾರಿ ತಾನು ರಜೆ ಮುಗಿಸಿ ಹೋದ ಮೇಲೆ ಹದಿನೈದು ದಿನಕ್ಕೆ ರಂಜಿತಾ ಚಿಕ್ಕಿ ಗಂಡ ಹಾರ್ಟ್ ಅಟ್ಯಾಕ್ ನಿಂದ ತೀರಿ ಹೋಗಿದ್ದರು. ಅಮೇರಿಕದಲ್ಲಿರುವಾಗಲೇ ಅಮ್ಮನಿಂದ ವಿಷಯ ತಿಳಿದು ಬಹಳ ಬೇಸರವಾಗಿತ್ತು. ಆದರೆ ಅವರನ್ನು ಫೋನಿನಲ್ಲಿ ಯೋಗಕ್ಷೇಮ ವಿಚಾರಿಸುವುದು ಸರಿ ಅನ್ನಿಸಿರಲಿಲ್ಲ. ಹಾಗಾಗಿ ಮೊದಲು ಮೈಸೂರಿನಲ್ಲಿರುವ ಚಿಕ್ಕಿ ಮನೆಗೆ ಹೋಗಿ ಮಾತನಾಡಿಸಿ ಬರಬೇಕೆಂದು ಕೊಂಡಿದ್ದಳು. ಹಾಗಾಗಿ ಕೂಡಲೇ ಅವರ ಹೆಸರು ಬಾಯಿಗೆ ಬಂದಿತ್ತು. 'ರಂಜಿತಾ ಅಮ್ಮಾವ್ರ ಮನೆಗಾ?' ಎಂದವಳೇ ಒಂದು ತರಹ ಮುಖ ಮಾಡಿದ್ದಳು ಶಾಂತ. ಅವಳ ಹಾವಭಾವಕ್ಕೆ ಹಿತನಿಗೆ ಸಿಟ್ಟು ಬಂದಿತ್ತು. 'ಯಾಕೆ ಶಾಂತ? ಆ ತರಹ ಮುಖ ಮಾಡುತ್ತಿದ್ದೀಯಾ?' ಧ್ವನಿಯೆತ್ತರಿಸಿ ಕೇಳಿದ್ದಳು. ಹೇಳಲೋ ಬೇಡವೋ ಎಂಬಂತೆ ಅಮ್ಮನ ಮುಖ ನೋಡಿದ ಶಾಂತ 'ಅವರಿಗೆ ಹುಚ್ಚು ಹಿಡಿದಿದೆಯಂತೆ' ಎಂದು ಮೆತ್ತಗೆ ಉಸುರಿದ್ದಳು. ಹಿತಳಿಗೆ ಇದು ನಿಜವಾಗ್ಲೂ ಶಾಕಿಂಗ್ ನ್ಯೂಸ್. 'ಏನು ರಂಜು ಚಿಕ್ಕಿಗೆ ಹುಚ್ಚೇ? ನಂಬಲು ಸಾಧ್ಯವಿಲ್ಲ. ಇವಳು ಹೇಳುತ್ತಿರುವುದು ನಿಜವೇನಾ ಅಮ್ಮಾ?' ಕಿರುಚಿಕೊಂಡು ಕೇಳಿದ್ದಳು. 'ಹೌದು.. ಬಾವ ತೀರಿದ ಮೇಲೆ ಯಾಕೋ ಸ್ವಲ್ಪ ತಲೆಕೆಟ್ಟಿದೆ ಅಂತಾರೆ. ಈಗ ಮೈಸೂರಿನಿಂದ ಇಲ್ಲೇ ಬಂದು ಬಾವನ ಊರು ಸೀಮತ್ತೂರಿ ನಲ್ಲಿ ನೆಲೆಸಿದ್ದಾಳೆ' ಎಂದಳು ಅಮ್ಮ. ಅಮ್ಮನೇ ಹೇಳಿದ ಮೇಲೆ ನಂಬದೆ ವಿಧಿಯಿಲ್ಲ. ಸ್ವಂತ ತಂಗಿ ಬಗ್ಗೆ ಆ ತರಹ ಸುಳ್ಳು ಹೇಳುವ ಸಾಧ್ಯತೆ ಕಮ್ಮಿ ಅಂದುಕೊಂಡಳು. ಆದರೆ ರಂಜಿತಾ ಅಮ್ಮನಿಗೆ ಸ್ವಂತ ತಂಗಿಯಾದರೂ ಮೊದಲಿನಿಂದಲೂ ಅವಳನ್ನು ಕಂಡರೆ ಅಷ್ಟಕಷ್ಟೆ. ಅದಕ್ಕೆ ಕಾರಣವು ಇಲ್ಲದಿಲ್ಲ. ರಂಜು ಚಿಕ್ಕಿ ಮದುವೆಯಾದದ್ದು ಸಣ್ಣ ಹಳ್ಳಿ ಸೀಮತ್ತೂರಿನ ತೋಟದ ಮಾಲಿಕರೊಬ್ಬರ ಮಗನನ್ನೇ ಆದರೂ ಆತ ವೃತ್ತಿಯಲ್ಲಿ ಲಾಯರ್. ಹಾಗಾಗಿ ಮೈಸೂರಿನಲ್ಲಿ ನೆಲೆಸಿದ್ದರು. ಅವರಿಗೆ ಹಳ್ಳಿ ತೋಟದ ಮೇಲೆ ಯಾವ ಆಸಕ್ತಿಯೂ ಇರಲಿಲ್ಲ. ಅವರು ಮೈಸೂರಿನಲ್ಲಿಯೇ ಮನೆ ಕಟ್ಟಿಸಿಕೊಂಡಿದ್ದರು. ಚಿಕ್ಕಮ್ಮನೂ ಅಮ್ಮನಂತೆ ಸಂಪ್ರದಾಯ ಕುಟುಂಬದಲ್ಲಿ ಬೆಳೆದಿದ್ದರೂ ಕೂಡ ಮದುವೆಯಾದ ಮೇಲೆ ಸಂಪೂರ್ಣ ಬದಲಾಗಿದ್ದರು. 'ಕರಿಮಣಿ ಸರವನ್ನೂ ಹಾಕುವುದಿಲ್ಲ. ಅಮ್ಮ ಕಲಿಸಿಕೊಟ್ಟ ಸಂಪ್ರದಾಯಗಳು ಅವಳಿಗೆ ಮರೆತು ಹೋಯಿತಾ?' ಅಮ್ಮ ಎಷ್ಟೋ ಸಲ ಅವಳ ಅತ್ತಿಗೆಯಲ್ಲಿ ಹೇಳುತ್ತಿದ್ದುದನ್ನು ಅವಳು ಕೇಳಿಸಿಕೊಂಡಿದ್ದಳು. ಅಷ್ಟಲ್ಲದೆ ತನ್ನ ಉದ್ದವಾದ ಕೂದಲನ್ನು ಭುಜದವರೆಗೆ ಕತ್ತರಿಸಿ ಎಲ್ಲರ ಕೋಪಕ್ಕೆ ಗುರಿಯಾಗಿದ್ದರು ಚಿಕ್ಕಮ್ಮ. ಯಾವಾಗಲೂ ಆಧುನಿಕ ವೇಷಭೂಷಣವನ್ನು ಹಾಕುತ್ತಿದ್ದ ಚಿಕ್ಕಿ ತನ್ನ ಹಳ್ಳಿಯ ಸಂಪ್ರದಾಯಸ್ಥರ ಕಣ್ಣಿಗೆ ಕೊಂಚ ನಡತೆ ಕೆಟ್ಟವಳಂತೆ ಕಾಣುತ್ತಿದ್ದುದು ಸಹಜ.

ಚಿಕ್ಕಮ್ಮನಿಗೆ ದುಡ್ಡಿನ ಕೊರತೆ ಇರಲಿಲ್ಲ. ಆದರೆ ಮಕ್ಕಳಾಗಿರಲಿಲ್ಲ. ತನ್ನ ಆ ಬೇಸರವನ್ನು ಅವರು ಹಿತನಲ್ಲಿ ಮರೆಯುತ್ತಿದ್ದರು. ಚಿಕ್ಕಮ್ಮ ಅಂದರೆ ಅವಳಿಗೆ ತುಂಬ ಇಷ್ಟ. ಅಮ್ಮನ ವಿರೋಧವನ್ನು ಲೆಕ್ಕಿಸದೇ ಅವಳು ಚಿಕ್ಕಮ್ಮನ ಮನೆಗೆ ಹೋಗುತ್ತಿದ್ದಳು. ಚಿಕ್ಕಮ್ಮ ತೋರಿಸುತ್ತಿದ್ದ ಪ್ರೀತಿ, ಜೊತೆಗೆ ಅವರ ಜೊತೆ ಸುತ್ತಾಟ, ವಿವಿಧ ತಿಂಡಿ ತಿನಸುಗಳು ಅವಳಿಗೆ ಅಲ್ಲಿ ಇರುವ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು. ಇನ್ನು ಚಿಕ್ಕಪ್ಪನ ಬಗ್ಗೆ ಹೇಳುವುದಾದರೆ ಅವರು ಸ್ವಲ್ಪ ಮುಂಗೋಪಿ. ಅವರಿಗೆ ಎಲ್ಲದರಲ್ಲೂ ಶಿಸ್ತು ಪರಿಪಾಲನೆ ಮಾಡಬೇಕಿತ್ತು. ಬೆಳಗ್ಗೆ ಚಿಕ್ಕಮ್ಮನ ಜೊತೆಗೆ ವಾಕಿಂಗ್, ವ್ಯಾಯಾಮ ಒಂದು ದಿನವು ಮಿಸ್ಸ್ ಮಾಡುತ್ತಿರಲಿಲ್ಲ. ಆಹಾರ ಸೇವನೆಯಲ್ಲೂ ಹಿತ ಮಿತ ಕಾಪಾಡಿಕೊಂಡಿದ್ದರು. ಕೆಲಸದವರೂ ಕೂಡ ಮನೆಯ ಕೆಲಸದಲ್ಲಿ ಏರುಪೇರು ಮಾಡಿದರೆ ಚಿಕ್ಕಮ್ಮನಿಗೆ ಬೈಗಳು. ಆದರೂ ಚಿಕ್ಕಮ್ಮ ಚಿಕ್ಕಪ್ಪನ ಸ್ವಭಾವಕ್ಕೆ ಸರಿಯಾಗಿ ಹೊಂದಿಕೊಂಡು ಅವರಿಗೆ ತಕ್ಕ ಹೆಂಡತಿ ಎನಿಸಿಕೊಂಡಿದ್ದರು.

'ಯಾರ್ರೀ ಸೀಮತ್ತೂರು?' ಕಂಡಕ್ಟರ್ ಧ್ವನಿಗೆ ಹಿತ ತನ್ನ ಯೋಚನೆಯಿಂದ ಎಚ್ಚೆತ್ತವಳೇ ದಡಬಡಿಸಿ ಬಸ್ಸಿನಿಂದ ಇಳಿದಳು.

ಬಸ್ಸು ಇಳಿದವಳೇ ಸುತ್ತಲೂ ಒಮ್ಮೆ ಕಣ್ಣು ಹಾಯಿಸಿದಳು. ಅವಳು ಈ ಊರಿಗೆ ಬಂದಿರುವುದು ಬಹಳ ಕಡಿಮೆ. ಸಣ್ಣವಳಿದ್ದಾಗ ಅಮ್ಮನ ಜೊತೆ ಒಂದೆರಡು ಸಲ ಬಂದಿರುವ ನೆನಪು. ಮತ್ತೆ ಅವಳು ಚಿಕ್ಕಮ್ಮನ ಮನೆ ಮೈಸೂರಿಗೆ ಹೋಗಿದ್ದೇ ಹೆಚ್ಚು. ಆಗ ಈ ಊರು ಕುಗ್ರಾಮವಾಗಿತ್ತು. ಈಗಿನ ಹಾಗೆ ವಾಹನ ಗಳ ವ್ಯವಸ್ಥೆ ಆಗಿರಲಿಲ್ಲ. ಸಾಲಾಗಿ ನಿಂತು ಪ್ರಯಾಣಿಕರ ದಾರಿ ಕಾಯುತ್ತಿರುವ ಆಟೊ ಡ್ರೈವರ್‌ಗಳು ಅವಳ ಕಣ್ಣಿಗೆ ಗೋಚರಿಸಲು ಚಿಕ್ಕಮ್ಮನ ಮನೆಗೆ ಇಲ್ಲಿಂದ ಹೇಗೆ ಹೋಗುವುದು ಎಂಬ ಅವಳ ಸಮಸ್ಯೆಗೆ ಪರಿಹಾರ ಸಿಕ್ಕಾಂತಾಗಿತ್ತು. ಆಟೋ ಹತ್ತಿ ಚಿಕ್ಕಮ್ಮನ ಮನೆಯ ಹೆಸರು ಹೇಳಿದ ಕೂಡಲೇ ಡ್ರೈವರ್ ಮರು ಮಾತಿಲ್ಲದೆ ಆಟೋ ಸ್ಟಾರ್ಟ್ ಮಾಡಿದ್ದ. ಹಳ್ಳಿಯಲ್ಲಿ ಎಲ್ಲರೂ ಸಾಧಾರಣವಾಗಿ ಚಿರಪರಿಚಿತರಾಗಿರುವ ಕಾರಣ ಯಾವ ತಕರಾರು ತೊಂದರೆ ಇಲ್ಲದೆ ಆಟೋ ದವನು ಅವಳನ್ನು ಚಿಕ್ಕಮ್ಮನ ಮನೆಯ ಕಡೆ ಕರೆದೊಯ್ಯುತ್ತಿದ್ದ. ಚಿಕ್ಕಮ್ಮನಿಗೆ ಹುಚ್ಚು ಎಂದು ಕೇಳಿದಾಗಿನಿಂದ ಅವಳಿಗೆ ಯಾವಾಗ ಚಿಕ್ಕಮ್ಮನನ್ನು ನೋಡು ತ್ತೇನೋ ಎಂದನಿಸಿತ್ತು. ಹಾಗಾಗಿ ಅಮೇರಿಕದಿಂದ ಬಂದ ಮರುದಿನವೇ ಅವಳು ಹೊರಟು ಬಂದಿದ್ದಳು. ಅವಳ ಆ ಯೋಚನೆಯಲ್ಲಿಮತ್ತೆ ಕಳೆದು ಹೋಗುವಷ್ಟರಲ್ಲಿ ಡ್ರೈವರ್ ಚಿಕ್ಕಮ್ಮನ ಮನೆಯ ಅಂಗಳದಲ್ಲಿ ಹೋಗಿ ಆಟೋ ನಿಲ್ಲಿಸಿದ್ದ. ಆಟೋದವನಿಗೆ ಹಣ ಕೊಟ್ಟು ಚಿಕ್ಕಮ್ಮನ ಮನೆಯ ಕಡೆ ನಡೆದಿದ್ದಳು. ಹಳ್ಳಿ ಮನೆಯಾದುದ್ದರಿಂದ ಮನೆಯ ಮುಂಬಾಗಿಲು ಹಾಕಿರಲಿಲ್ಲ. ತೆರೆದ ಬಾಗಿಲಿನ ಮೂಲಕ ಒಳಪ್ರವೇಶಿಸಿದಳು ಹಿತ.

ಮನೆಯಲ್ಲಿ ಚಿಕ್ಕಮ್ಮ ಮಾತ್ರ ಇರಬಹುದು ಎಂದುಕೊಂಡು ಅವರನ್ನು ಅರಸುತ್ತಾ ಅಡುಗೆ ಮನೆ ಪ್ರವೇಶಿಸಿದಳು. 'ಅಲ್ಲಿ ಯಾರೋ ಇದಾರಲ್ಲಾ?' ಎಂದು